# ಕರ್ನಾಟಕ ವಿಧಾನ ಪರಿಷತ್ತು

(ನಿಯಮ-72)

ವಿಷಯ: ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ,ಶ್ರೀ ಬಿ.ಎಂ. ಫಾರೂಖ್, ಶ್ರೀ ಟಿ.ಎ. ಶರವಣ ಹಾಗೂ ಶ್ರೀ ಸಿ.ಎನ್.ಮಂಜೇಗೌಡ, ಶ್ರೀಮತಿ ಉಮಾಶ್ರೀ, ಶ್ರೀಮತಿ ಭಾರತಿ ಶೆಟ್ಟಿ ಇವರುಗಳು ನಿಯಮ 72ರಡಿ "ಸಾಮಾಜಿಕ ಪಿಡುಗು ಆಗಿರುವ ಹೆಣ್ಣು ಭ್ರೂಣ ಹತ್ಯೆ ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿರುವುದು, ಇತ್ತೀಚಿಗೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ವರದಿಯಾಗಿರುವ ಪ್ರಕರಣಗಳಲ್ಲಿ ತಿಳಿದು ಬಂದಿದೆ. ಈ ಭ್ರೂಣ ಹತ್ಯೆಯಲ್ಲಿ ವ್ಯವಸ್ಥಿತವಾದ ಜಾಲವಿದೆ. ಭ್ರೂಣ ಲಿಂಗ ಹತ್ಯೆ ಗಂಭೀರ ಅಪರಾಧ ಎನ್ನುವ ಅರಿವಿದ್ದರೂ, ವಿದ್ಯಾವಂತ ತಂದೆ-ತಾಯಿಗಳು, ಪೋಷಕರು, ತಿಳಿಗೇಡಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯೊಂದಿಗೆ ಶಾಮೀಲಾಗಿ ಕಾನೂನು ಬಾಹಿರ ಕೃತ್ಯವೆಸಗಿದ್ದಾರೆ ಇದರೊಂದಿಗೆ ತಾನೇ ಗರ್ಭಧಾರಣೆ (IVF) ಮೂಲಕವೂ ಪಡೆಯುವ ತಂತ್ರಗಳನ್ನು ಮಾಡುತ್ತಿದ್ದು, ಇದಕ್ಕೆ ಗಾರ್ಮೆಂಟ್ಸ್ ಯುವತಿಯರನ್ನು ಬಳಸಿಕೊಳ್ಳಲಾಗಿದೆ. ದೇಶದಲ್ಲಿ ಬಲವಾದ ಲಿಂಗ ಪತ್ತೆ ನಿಷೇಧ ಕಾಯಿದೆ, (PCPNDT) Act- 1994, ಮಕ್ಕಳ ಮಾರಾಟ ನಿಷೇಧಕಾಯಿದೆ (Child Protection Act-1960) ಮತ್ತು ಬಾಡಿಗೆ ತಾಯ್ತನ ಕಾಯಿದೆ Surrogacy (Regulation) Act-2021 ಜಾರಿಯಲ್ಲಿದ್ದರು ಬೇಜಾವಬ್ದಾರಿಯುತ ಮತ್ತು ಸಮಾಜ ದ್ರೋಹಿ ವೈದ್ಯರು, ವೈದ್ಯಕೀಯ ಶುಷ್ರೂಸಕರು ಮತ್ತು ಮಧ್ಯವರ್ತಿಗಳು ಇಂತಹ ಕೃತ್ಯ ಎಸಗಿದ್ದಾರೆ. ಇಂತಹ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಜರುಗಿಸುವಲ್ಲಿ ಸರ್ಕಾರ ಸಂಬಂಧಿಸಿದ ಇಲಾಖೆಗಳನ್ನು ಜಾಗೃತಗೊಳಿಸಬೇಕು ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂಬ" ಪ್ರಸ್ತಾಪಕ್ಕೆ:-

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

ಸಾಮಾಜಿಕ ಪಿಡುಗು ಆಗಿರುವ ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಇತ್ತೀಚಿಗೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ವರದಿಯಾಗಿರುವ ಪ್ರಕರಣಗಳಲ್ಲಿ ಈ ಕೆಳಗಿನಂತೆ ಕ್ರಮವಹಿಸಲಾಗಿದೆ.

- ದಿನಾಂಕ: 31.05.2023 ರಂದು ರಾಜ್ಯ ಸಕ್ಷಮ ಪ್ರಾಧಿಕಾರ (State Appropriate Authority) ತಂಡವು ಮೈಸೂರು ಜಿಲ್ಲೆಯಲ್ಲಿ ಗುಪ್ತ ಕಾರ್ಯಾಚರಣೆಯನ್ನು (Decoy Operation) ಕೈಗೊಂಡಿದ್ದು, ಸ್ವಲ್ಪದರಲ್ಲೇ ಪ್ರಕರಣವು ತಪ್ಪಿಸಿಕೊಂಡಿದ್ದು, ಗುಪ್ತ ಕಾರ್ಯಚಾರಣೆಯು ವಿಫಲಗೊಂಡಿರುತ್ತದೆ. ನಂತರ ವಿವಿಧ ಮುದ್ರಣ ಹಾಗೂ ಸಮೂಹ ಮಾಧ್ಯಮಗಳಲ್ಲಿ ದಿನಾಂಕ: 15.10.2023 ರಂದು "ಭ್ರೂಣ ಹತ್ಯೆ ಪ್ರಕರಣ" ದ ಕುರಿತು ಈ ಹಿಂದೆ ರಾಜ್ಯ ಸಕ್ಷಮ ಪ್ರಾಧಿಕಾರದಲ್ಲಿ ತಪ್ಪಿಸಿಕೊಂಡಿದ್ದ, ಅಪರಾಧಿಗಳು ಪೊಲೀಸ್ ಇಲಾಖೆಯ ವಿಚಾರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಈ ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿ.ಐ.ಡಿ. ತಂಡಕ್ಕೆ ವರ್ಗಾಯಿಸಲಾಗಿದೆ.

Scanned with OKEN Scanner

- 03 ತಿಂಗಳ ಹಿಂದೆ ಉಪನಿರ್ದೇಶಕರು (ವೈದ್ಯಕೀಯ-2) ಇವರ ನೇತೃತ್ವದ State Inspection and Monitoring Committee (SIMC) ಸಮಿತಿಯು, ಅದೇ ಗ್ಯಾಂಗ್ ವಿರುದ್ಧ ಡಿಕಾಯ್ ಕಾರ್ಯಾಚರಣೆ (decoy operation) ಮಾಡಿದ್ದು, ಸ್ವಲ್ಪದರಲ್ಲೇ ತಪ್ಪಿಸಿಕೊಂಡಿರುತ್ತಾರೆ.
- ಮೇಲೆ ತಿಳಿಸಿದ ಪ್ರಕರಣದಲ್ಲಿ ಮೈಸೂರು ಜಿಲ್ಲೆಯಲ್ಲಿನ ಇಬ್ಬರು ಅಧಿಕಾರಿಗಳ ಕರ್ತವ್ಯಲೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಈ ಅಧಿಕಾರಿಗಳನ್ನು ವಿಚಾರಣೆಯನ್ನು ಬಾಕಿಯಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ.

**ಸಾಮಾಜಿಕ ಪಿಡುಗು ಆಗಿರುವ ಅಕ್ರಮ ಹೆಣ್ಣು ಭ್ರೂಣಗಳ ಹತ್ಯೆ ತಡೆಯಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ :**

1. ಒಟ್ಟು 6395 ಸ್ಕ್ಯಾನಿಂಗ್ ಸೆಂಟರ್‌ಗಳು ನೋಂದಣಿಗೊಂಡಿದ್ದು, 6068 ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳು ಮತ್ತು 327 ಸರ್ಕಾರಿ ಸ್ಕ್ಯಾನಿಂಗ್ ಸೆಂಟರ್‌ಗಳು ಇದ್ದು, "ಬಾಲಿಕಾ" ಸಾಫ್ಟ್‌ವೇರ್ ಮುಖಾಂತರ ಎಲ್ಲಾ ಸೆಂಟರ್‌ಗಳು ಕಡ್ಡಾಯವಾಗಿ ನೋಂದಣಿಗೊಳ್ಳಬೇಕಾಗುತ್ತದೆ.
2. ಪಿ.ಸಿ & ಪಿ.ಎನ್.ಡಿ.ಟಿ. ಕಾಯ್ದೆಯಡಿ ಬರುವ ಎಲ್ಲಾ ಶಾಸನ ಬದ್ಧ ಸಮಿತಿಗಳು ರಾಜ್ಯ ಮತ್ತು ಜಿಲ್ಲೆಗಳಲ್ಲಿ ರಚನೆಗೊಂಡಿರುತ್ತದೆ.
3. ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಸಕ್ಷಮ ಪ್ರಾಧಿಕಾರಿಗಳನ್ನಾಗಿ ನೇಮಿಸಿ, ಇವರ ನೇತೃತ್ವದಲ್ಲಿ ಜಿಲ್ಲಾ ಸಲಹಾ ಸಮಿತಿ, ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಈ ಸಮಿತಿಯು ಪ್ರತಿ ಸ್ಕ್ಯಾನಿಂಗ್ ಸೆಂಟರ್‌ಗಳನ್ನು 3 ತಿಂಗಳಿಗೊಮ್ಮೆ ತಪಾಸಣೆ ನಡೆಸುತ್ತಿರುತ್ತದೆ.
4. ರಾಜ್ಯಮಟ್ಟದಿಂದ 2022-23 ನೇ ಸಾಲಿನಲ್ಲಿ 18 ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಮತ್ತು 2023-24 ನೇ ಸಾಲಿನಲ್ಲಿ 04 ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಹಾಗೂ ಜಿಲ್ಲಾಮಟ್ಟ ದಿಂದ 4408 ಸ್ಕ್ಯಾನಿಂಗ್ ಸೆಂಟರ್‌ಗಳನ್ನು ತಪಾಸಣೆ ನಡೆಸಲಾಗಿದೆ.
5. ರಾಜ್ಯದಲ್ಲಿ ಈವರೆಗೆ ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯನ್ನು ಉಲ್ಲಂಘಿಸಿರುವ ಸ್ಕ್ಯಾನಿಂಗ್ ಸೆಂಟರ್ / ಮಾಲೀಕರು/ ವೈದ್ಯರ ವಿರುದ್ಧ ಒಟ್ಟು 100 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದು, 24 ಪ್ರಕರಣಗಳು ದಂಡವಿಧಿಸಿ ಖುಲಾಸೆಗೊಂಡಿದ್ದು, 76 ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಬಾಕಿಯಿರುತ್ತದೆ.
6. ತರಬೇತಿ ಹೊಂದಿರದ ಅಥವಾ ತಜ್ಞರಲ್ಲದ ವೈದ್ಯರನ್ನು ನಿಯಂತ್ರಿಸುವ ಸಲುವಾಗಿ, ಗರ್ಭಪೂರ್ವ ಮತ್ತು ಪ್ರಸವ ಪೂರ್ವಪತ್ತೆ ತಂತ್ರ ವಿಧಾನಗಳು (ಲಿಂಗ ಆಯ್ಕೆ ನಿಷೇಧ) (ಆರು ತಿಂಗಳ ತರಬೇತಿ) ನಿಯಮಗಳು, 2014 ರ ಪ್ರಕಾರ ಎಂ.ಬಿ.ಬಿ.ಎಸ್ ಪದವಿ ಹೊಂದಿದ ಸ್ಕ್ಯಾನಿಂಗ್ ಸೆಂಟರ್ ನಡೆಸುತ್ತಿರುವ ವೈದ್ಯರಿಗೆ ಸಾಮರ್ಥ್ಯ ಆಧಾರಿತ ಪರೀಕ್ಷೆ (Competency Based Test) ಮತ್ತು ತರಬೇತಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗ ದೊಂದಿಗೆ ನಡೆಸಲಾಗುತ್ತಿದೆ.

Scanned with OKEN Scanner

7. ಅಲ್ಟ್ರಾಸೌಂಡ್ ತಯಾರಕರು, ಮಾರಾಟಗಾರರು ಮತ್ತು ರಿಪೇರಿ ಮಾಡುವವರನ್ನು ರಾಜ್ಯದಲ್ಲಿ ನೋಂದಾಯಿಸಿ, ಅವರಿಂದ ಮೆಷಿನ್‌ಗಳ ಮಾರಾಟದ ಬಗ್ಗೆ ತ್ರೈಮಾಸಿಕ ವರದಿಯನ್ನು ಪಡೆಯಲಾಗುತ್ತಿದೆ.
8. ಐ.ಇ.ಸಿ. ಮುಖಾಂತರ ಸಾರ್ವಜನಿಕರಿಗೆ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.
9. ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುವಂತಹ ಸ್ಕ್ಯಾನಿಂಗ್ ಸೆಂಟರ್ / ಆಸ್ಪತ್ರೆ / ವೈದ್ಯರು /ದಲ್ಲಾಳಿಗಳು/ಗರ್ಭಿಣಿಯರ ಸಂಬಂಧಿಕರ ವಿರುದ್ಧ ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ಕರ್ನಾಟಕ ಸರ್ಕಾರದಿಂದ ರೂ.50,000/-ಗಳ ಬಹುಮಾನ ನೀಡಲಾಗುತ್ತಿದೆ.
10. ದಿನಾಂಕ: 29.11.2023 ರಂದು ನಡೆದ ಸಭೆಯಲ್ಲಿ ಎಲ್ಲಾ ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ದಿನಾಂಕ: 31.12.2023 ರೊಳಗೆ ಎಲ್ಲಾ ಸ್ಕ್ಯಾನಿಂಗ್ ಸೆಂಟರ್ /ಆಸ್ಪತ್ರೆ /ಕ್ಲಿನಿಕ್‌ಗಳನ್ನು ತಪಾಸಣೆ ನಡೆಸಿ, ಪಿ.ಸಿ ಮತ್ತು ಪಿ.ಎನ್.ಡಿ.ಟಿ. ಹಾಗೂ ಕೆ.ಪಿ.ಎಂ.ಇ. ಪರವಾನಿಗೆಯಿಲ್ಲದ ಸೆಂಟರ್/ ಆಸ್ಪತ್ರೆ / ಕ್ಲಿನಿಕ್‌ಗಳನ್ನು ಕೂಡಲೇ ಮುಚ್ಚಲು ಆದೇಶಿಸಲಾಗಿದೆ.
11. ಎಲ್ಲಾ IVF & Surrogacy ಕೇಂದ್ರಗಳು ಕಡ್ಡಾಯವಾಗಿ ART & Surrogacy Actಅಡಿಯಲ್ಲಿ ನೋಂದಣಿಯಾಗಬೇಕು. ತಪ್ಪಿದಲ್ಲಿ, ಯಾವುದೇ ಅನಧಿಕೃತ ಅಥವಾ ಪರವಾನಗಿ ಇಲ್ಲದ ಕೇಂದ್ರಗಳನ್ನು ಮುಚ್ಚಿಸಿ, ಅಂತಹ ಕೇಂದ್ರಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುವುದು.
12. ಬಾಡಿಗೆ ತಾಯ್ತನ Surrogacy (Regulation) Act-2021 Section 4 (iii) (a) (I) (II) (III) ರಂತೆ ದಾಖಲಾತಿಗಳನ್ನು ನೀಡುವ ಅರ್ಹ ದಂಪತಿಗಳಿಗೆ ಮಾತ್ರ ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲು ಹಾಗೂ Section 4(iii) (a)(I)(II)(III) (IV) & (v) ರಂತೆ ದಾಖಲಾತಿಗಳನ್ನು ಒದಗಿಸುವವರಿಗೆ ಬಾಡಿಗೆ ತಾಯಿ ಆಗಲು ಅನುಮತಿಯನ್ನು ನೀಡಲಾಗುತ್ತಿದೆ. ಇಲ್ಲವಾದಲ್ಲಿ, ಯಾರಿಗೂ ಬಾಡಿಗೆ ತಾಯ್ತನಕ್ಕೆ ಅನುಮತಿ ನೀಡಲಾಗುವುದಿಲ್ಲ.
13. ಮಕ್ಕಳ ಮಾರಾಟ ನಿಷೇಧ ಕಾಯ್ದೆಯು (Child Protection Act-1960) ಮಹಿಳಾ ಮತ್ತು ಮಕ್ಕಳ ಸಬಲೀಕರಣ ಇಲಾಖೆಗೆ ಸಂಬಂಧಿಸಿರುವುದರಿಂದ, ಆರೋಗ್ಯ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು.

**ಕಡತ ಸಂಖ್ಯೆ: ಆಕುಕ/ನಿಯಮ-72/2023**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner